ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	349
ಮಾನ್ಯ ಸದಸ್ಯರ ಹೆಸರು	ಶ್ರೀ ಡಿ.ಎಸ್. ಅರುಣ್
ಉತ್ತರಿಸಬೇಕಾದ ದಿನಾಂಕ	18.02.2022
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿವಿಧ ನಿಗಮಗಳು ಯಾವುವು:	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಈ ಕೆಳಕಂಡ ವಿವಿಧ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ. 1. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ 2. ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ. 3. ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ. 4. ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ 5. ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ 6. ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ 7. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ 8. ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ 9. ಕರ್ನಾಟಕ ಮರಾಠ ಅಭಿವೃದ್ಧಿ ನಿಗಮ (ನೊಂದಣಿ ಪ್ರಕ್ರಿಯೆ ಇತ್ತೀಚೆಗೆ ಮುಗಿದಿರುತ್ತದೆ.) 10. ಕರ್ನಾಟಕ ಕಾಡುಗೊಲ್ಲ ಅಭಿವೃದ್ಧಿ ನಿಗಮ (ನೊಂದಣಿ ಯಾಗಿರುವುದಿಲ್ಲ.) 11. ಕರ್ನಾಟಕ ಒಕ್ಕಲಿಗರ ಅಭಿವೃದ್ಧಿ ನಿಗಮ (ನೊಂದಣಿಯಾಗಿರುವುದಿಲ್ಲ.) 12. ಕರ್ನಾಟಕ ಆರ್ಯವೈಶ್ಯ ಸಮುದಾಯಗಳ ಅಭಿವೃದ್ಧಿ ನಿಗಮ (ಹಿಂದುಳಿದ ವರ್ಗಕ್ಕೆ ಸೇರಿರುವುದಿಲ್ಲ.)
ಆ)	ನಿಗಮಗಳ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ ಮತ್ತು ಅರಿವು ನವೀಕರಣ ಯೋಜನೆಗಳಿಗೆ 2021-2022ನೇ ಸಾಲಿನಲ್ಲಿ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು: (ನಿಗಮವಾರು ಮಾಹಿತಿ ನೀಡುವುದು)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯ ನಿಗಮಗಳಲ್ಲಿ 2021-2022ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ ಮತ್ತು ಅರಿವು ನವೀಕರಣ ಯೋಜನೆಗಳಿಗೆ ಸ್ವೀಕರಿಸಿರುವ ಅರ್ಜಿಗಳ ವಿವರ ಈ ಕೆಳಕಂಡಂತಿದೆ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಕ್ರ ಸಂ	ಯೋಜನೆಗಳ ಹೆಸರು	ಇದೂವರೆವಿಗೂ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
1	ಸ್ವಯಂ ಉದ್ಯೋಗ ನೇರ ಸಾಲ ಯೋಜನೆ	10737
2	ಅರಿವು ನವೀಕರಣ ಯೋಜನೆ (ವೈದ್ಯಕೀಯ ಕೋರ್ಸ್ ಪರೀಕ್ಷೆಗಳು ಇನ್ನೂ ಮುಕ್ತಾಯವಾಗಿಲ್ಲದ ಕಾರಣ ಅರ್ಜಿ ಸ್ವೀಕಾರ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.)	2345

ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ

ಕ್ರ ಸಂ.	ಯೋಜನೆಗಳ ಹೆಸರು	ಇದೂವರೆವಿಗೂ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
1	ಸ್ವಯಂ ಉದ್ಯೋಗ ನೇರ ಸಾಲ ಯೋಜನೆ	3904
2	ಅರಿವು ನವೀಕರಣ ಯೋಜನೆ (ವೈದ್ಯಕೀಯ ಕೋರ್ಸ್ ಪರೀಕ್ಷೆಗಳು ಇನ್ನೂ ಮುಕ್ತಾಯವಾಗಿಲ್ಲದ ಕಾರಣ ಅರ್ಜಿ ಸ್ವೀಕಾರ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.)	24

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ

ಕ್ರ ಸಂ.	ಯೋಜನೆಗಳ ಹೆಸರು	ಇದೂವರೆವಿಗೂ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
1	ಸ್ವಯಂ ಉದ್ಯೋಗ ನೇರ ಸಾಲ ಯೋಜನೆ	2075
2	ಅರಿವು ನವೀಕರಣ ಯೋಜನೆ (ವೈದ್ಯಕೀಯ ಕೋರ್ಸ್ ಪರೀಕ್ಷೆಗಳು ಇನ್ನೂ ಮುಕ್ತಾಯವಾಗಿಲ್ಲದ ಕಾರಣ ಅರ್ಜಿ ಸ್ವೀಕಾರ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.)	25

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ

ಕ್ರ ಸಂ.	ಯೋಜನೆಗಳ ಹೆಸರು	ಇದೂವರೆವಿಗೂ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
1	ಸ್ವಯಂ ಉದ್ಯೋಗ ನೇರ ಸಾಲ ಯೋಜನೆ	134

ಕರ್ನಾಟಕ ವಿಶ್ವಕರ್ಮ ಅಭಿವೃದ್ಧಿ ನಿಗಮ

ಕ್ರ ಸಂ.	ಯೋಜನೆಗಳ ಹೆಸರು	ಇದೂವರೆವಿಗೂ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ
1	ಸ್ವಯಂ ಉದ್ಯೋಗ ನೇರ ಸಾಲ ಯೋಜನೆ	4341
2	ಅರಿವು ನವೀಕರಣ ಯೋಜನೆ (ವೈದ್ಯಕೀಯ ಕೋರ್ಸ್ ಪರೀಕ್ಷೆಗಳು ಇನ್ನೂ ಮುಕ್ತಾಯವಾಗಿಲ್ಲದ ಕಾರಣ ಅರ್ಜಿ ಸ್ವೀಕಾರ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.)	293

		ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ 2021-22ನೇ ಸಾಲಿಗೆ ಸ್ವಯಂ ಉದ್ಯೋಗ ನೇರ ಸಾಲ ಯೋಜನೆಯಡಿಯಲ್ಲಿ ದಿನಾಂಕ:26.11.2021 ರಂದು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. 2021-22ನೇ ಸಾಲಿನಲ್ಲಿ ಅರಿವು ನವೀಕರಣ ಯೋಜನೆಗೆ ದಿನಾಂಕ:26.11.20212 ರಂದು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವೈದ್ಯಕೀಯ ಕೋರ್ಸ್ ಪರೀಕ್ಷೆಗಳು ಇನ್ನೂ ಮುಕ್ತಾಯವಾಗಿಲ್ಲದ ಕಾರಣ ಅರ್ಜಿ ಸ್ವೀಕಾರ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. **ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ** 2021-22ನೇ ಸಾಲಿಗೆ ಸ್ವಯಂ ಉದ್ಯೋಗ ನೇರ ಸಾಲ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದಿಲ್ಲ. 2021-22 ನೇ ಸಾಲಿನಲ್ಲಿ ಅರಿವು ಶೈಕ್ಷಣಿಕ ಸಾಲ (ನವೀಕರಣ) ಯೋಜನೆಗೆ ದಿನಾಂಕ:26.11.20212 ರಂದು ಅರ್ಜಿ ಆಹ್ವಾನಿಸಲಾಗಿದ್ದು, 171 ಅರ್ಜಿಗಳು ಸ್ವೀಕೃತವಾಗಿರುತ್ತವೆ. **ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ನಿಗಮ** <table><tr><th>ಕ್ರ ಸಂ.</th><th>ಯೋಜನೆಗಳ ಹೆಸರು</th><th>ಇದೂವರೆವಿಗೂ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ</th></tr><tr><td>1</td><td>ಸ್ವಯಂ ಉದ್ಯೋಗ ನೇರ ಸಾಲ ಯೋಜನೆ</td><td>2097</td></tr><tr><td>2</td><td>ಅರಿವು ನವೀಕರಣ ಯೋಜನೆ (ವೈದ್ಯಕೀಯ ಕೋರ್ಸ್ ಪರೀಕ್ಷೆಗಳು ಇನ್ನೂ ಮುಕ್ತಾಯವಾಗಿಲ್ಲದ ಕಾರಣ ಅರ್ಜಿ ಸ್ವೀಕಾರ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.)</td><td>35</td></tr></table>
ಇ)	ಅರಿವು ಶೈಕ್ಷಣಿಕ ಸಾಲ ನವೀನ ಯೋಜನೆಗೆ 2021-22ನೇ ಸಾಲಿಗೆ ಯಾವಾಗ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವಿಳಂಬಕ್ಕೆ ಕಾರಣವೇನು:	ಅನುದಾನ ಲಭ್ಯತೆಯನುಸಾರ ಕ್ರಮ ತೆಗೆದುಕೊಳ್ಳಲಾಗುವುದು.
ಈ)	ಸ್ವಯಂ ಉದ್ಯೋಗ ನೇರ ಸಾಲ ಯೋಜನೆ ಮತ್ತು ಅರಿವು ನವೀಕರಣ ವಿದ್ಯಾರ್ಥಿಗಳಿಗೆ ಇದುವರೆಗೂ ಎಷ್ಟು ಅರ್ಹ ಅರ್ಜಿಗಳಿಗೆ ಡಿ.ಬಿ.ಟಿ. ಅಥವಾ ಆರ್.ಟಿ.ಜಿ.ಎಸ್., ಮೂಲಕ ಸಾಲ/ಸಹಾಯಧನ ಬಿಡುಗಡೆ ಮಾಡಲಾಗಿದೆ; (ನಿಗಮವಾರು ಮಾಹಿತಿ ನೀಡುವುದು)	ಡಿಬಿಟಿ ಮೂಲಕ ಸಾಲ/ಸಹಾಯಧನ ಬಿಡುಗಡೆ ಮಾಡುವ ಪ್ರಕ್ರಿಯೆ ಚಾಲ್ತಿಯಲಿರುತ್ತದೆ.

ಉ)	ಇ-ಗವರ್ನೆನ್ಸ್ ವತಿಯಿಂದ ಅರಿವು ನವೀನ ಮತ್ತು ನವೀಕರಣ ಸುವಿಧಾ ತಂತ್ರಾಂಶವನ್ನು ತಯಾರಿಸಲು ಎಷ್ಟು ಮೊತ್ತವನ್ನು ಪಾವತಿಸಲಾಗಿದೆ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಇದೇ ರೀತಿಯ ತಂತ್ರಾಂಶವನ್ನು ಸಿದ್ಧಪಡಿಸಲು ಕಡಿಮೆ ವೆಚ್ಚದಲ್ಲಿ ಭರಿಸಲು ಅವಕಾಶವಿರಲಿಲ್ಲವೇ?	ಸೇವಾಸಿಂಧು ಪೋರ್ಟ್‌ಲ್ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು ನಾಗರೀಕರಿಗೆ ನೀಡುವ ಸೇವೆಗಳಿಗೆ ಒಂದು ಅಂಶದ ಗಮ್ಯಸ್ಥಾನ (One point Destination) ಆಗಿರುತ್ತದೆ. ಅದೇ ರೀತಿ ಸುವಿಧಾ ಪೋರ್ಟ್‌ಲ್ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು ನಾಗರೀಕರಿಗೆ ನೀಡುವ ಸೌಲಭ್ಯಗಳನ್ನು ಪಡೆಯಲು ಒಂದು ಅಂಶದ ಗಮ್ಯಸ್ಥಾನ ಆಗಿರುತ್ತದೆ. ಸದರಿ ಪೋರ್ಟ್‌ಲ್‌ನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿಗಮಗಳಲ್ಲಿ ಯೋಜನೆಗಳನ್ನು ಅಳವಡಿಸಲಾಗಿರುತ್ತದೆ. ನಿಗಮಗಳಿಂದ ಯಾವುದೇ ಮೊತ್ತವನ್ನು ಪಾವತಿಸಿರುವುದಿಲ್ಲ.

ಸಂಖ್ಯೆ:ಹಿಂವಕ 95 ಬಿಂಎಂಎಸ್ 2022

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಸಮಾಜ ಕಲ್ಯಾಣ ಸಚಿವರು